ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್ / ಅವ್ಯಕ್ತ ಮುರಳಿ 18-01-1999.

# *ವರ್ತಮಾನ ಸಮಯ ಪ್ರಮಾಣ ವೈರಾಗ್ಯ ವೃತ್ತಿಯನ್ನು ಪ್ರತ್ಯಕ್ಷ ಮಾಡಿ ಸಾಧನೆಯ ವಾಯುಮಂಡಲವನ್ನು ತಯಾರು ಮಾಡಿರಿ*

(वर्तमान समय के प्रमाण वैराग्य वृत्ति को इमर्ज कर साधना का वायुमण्डल बनाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಸ್ನೇಹದ ಸಾಗರ ಬಾಪ್‌ದಾದಾರವರು ತನ್ನ ಅತಿ ಸ್ನೇಹಿ ಮಕ್ಕಳೊಂದಿಗೆ ಮಿಲನ ಮಾಡುತ್ತಿದ್ದಾರೆ. ಇಂದಿನ ದಿನ ವಿಶೇಷ ಸ್ನೇಹದ ದಿನವಾಗಿದೆ. ಅಮೃತವೇಳೆಯಿಂದ ಹಿಡಿದು ನಾಲ್ಕಾರು ಕಡೆಯ ಮಕ್ಕಳು ಸ್ನೇಹದ ಅಲೆಯಲ್ಲಿ ತೇಲಾಡುತ್ತಿದ್ದಾರೆ. ಪ್ರತಿಯೊಂದು ಮಗುವಿನ ಹೃದಯದ ಸ್ನೇಹವು ಹೃದಯರಾಮನಾದ ತಂದೆಯ ಬಳಿ ತಲುಪಿದೆ. ಬಾಪ್‌ದಾದಾರವರು ಸಹ ಎಲ್ಲಾ ಮಕ್ಕಳ ಸ್ನೇಹಕ್ಕೆ ಪ್ರತಿಕ್ರಿಯೆಯಾಗಿ ಸ್ನೇಹ ಹಾಗೂ ಸಮರ್ಥತೆಯ ವರದಾನವನ್ನು ಕೊಡುತ್ತಿದ್ದಾರೆ. ಇಂದಿನ ದಿನವನ್ನು ಬಾಪ್‌ದಾದಾರವರು ಯಜ್ಞದ ಸ್ಥಾಪನೆಯಲ್ಲಿ ವಿಶೇಷ ಪರಿವರ್ತನೆಯ ದಿನ ಎಂದು ಕರೆಯುತ್ತಾರೆ. ಇಂದಿನ ದಿನ ಬ್ರಹ್ಮಾ ತಂದೆ ಗುಪ್ತ ರೂಪದಲ್ಲಿ ಬೆನ್ನೆಲುಬಾಗಿ ತನ್ನ ಮಕ್ಕಳನ್ನು ಸಾಕಾರ ರೂಪದಲ್ಲಿ ವಿಶ್ವದ ವೇದಿಕೆಯ ಮೇಲೆ ಪ್ರತ್ಯಕ್ಷ ಮಾಡಿದರು, ಆದ್ದರಿಂದ ಈ ದಿನವನ್ನು ಮಕ್ಕಳ ಪ್ರತ್ಯಕ್ಷತೆಯ ದಿನ ಎಂದು ಕರೆಯಲಾಗುತ್ತದೆ. ಸಮರ್ಥ ದಿನ ಎಂದು ಕರೆಯಲಾಗುತ್ತದೆ. ವಿಲ್ ಪವರನ್ನು(ದೃಢತೆಯ ಶಕ್ತಿ) ಕೊಡುವ ದಿನ ಎಂದು ಹೇಳಲಾಗುತ್ತದೆ. ಬ್ರಹ್ಮಾ ತಂದೆ ಗುಪ್ತ ರೂಪದಲ್ಲಿ ಕಾರ್ಯ ಮಾಡುತ್ತಿದ್ದಾರೆ. ಬೇರೆಯಾಗಿಲ್ಲ, ಜೊತೆಯಲ್ಲಿಯೇ ಇದ್ದಾರೆ

ಕೇವಲ ಗುಪ್ತ ರೂಪದಲ್ಲಿ ಮಾಡಿಸುತ್ತಿದ್ದಾರೆ. ಈ ಅವ್ಯಕ್ತ ದಿನ ಮಕ್ಕಳ ಕಾರ್ಯವನ್ನು ತೀವ್ರ ಗತಿಯಲ್ಲಿ ತರುವಂತಹ ದಿನವಾಗಿದೆ. ಈಗಲೂ ಸಹ ಪ್ರತಿಯೊಂದು ಮಗುವಿನ ಛತ್ರಛಾಯೆಯಾಗಿ ಪಾಲನೆಯ ಕರ್ತವ್ಯ ಮಾಡುತ್ತಿದ್ದಾರೆ. ಹೇಗೆ ತಾಯಿ ಮಕ್ಕಳಿಗೆ ಛತ್ರ ಛಾಯೆಯಾಗಿರುತ್ತಾಳೆಯೋ ಅದೇ ರೀತಿ ಅಮೃತ ವೇಳೆಯಿಂದ ಹಿಡಿದು ಬ್ರಹ್ಮಾ ತಾಯಿಯು ನಾಲ್ಕಾರು ಕಡೆಯ ಮಕ್ಕಳ ಲಾಲನೆ-ಪಾಲನೆ ಮಾಡುತ್ತಾ ಇರುತ್ತಾರೆ. ಸಾಕಾರದಲ್ಲಿ  ಮಕ್ಕಳೇ ನಿಮಿತ್ತರಾಗಿದ್ದಾರೆ. ಆದರೆ ಭಾಗ್ಯ ವಿಧಾತ ಬ್ರಹ್ಮಾ ತಾಯಿ ಪ್ರತಿಯೊಂದು ಮಗುವಿನ ಭಾಗ್ಯವನ್ನು ನೋಡಿ ಮಕ್ಕಳ ವಿಶೇಷ ಶಕ್ತಿ, ಧೈರ್ಯ (ಸಾಹಸ), ಉತ್ಸಾಹ ಉಲ್ಲಾಸದ ಪಾಲನೆ ಮಾಡುತ್ತಾರೆ. ಶಿವ ತಂದೆಯಂತೂ ಜೊತೆಯಲ್ಲಿಯೇ ಇರುತ್ತಾರೆ ಆದರೆ ವಿಶೇಷ ಬ್ರಹ್ಮಾ ತಂದೆಗೆ ಪಾಲನೆಯ ಪಾತ್ರವಿದೆ.

ಇಂದಿನ ದಿನ ಭಾಗ್ಯವಿಧಾತ ಬ್ರಹ್ಮಾ ಪ್ರತಿಯೊಂದು ಮಗುವಿಗೂ ವಿಶೇಷ ಸ್ನೇಹದ ಬದಲಾಗಿ ವರದಾನಗಳ ಭಂಡಾರವನ್ನು ಬಂಡಾರಿಯಾಗಿ ಹಂಚುತ್ತಿದ್ದಾರೆ. ಯಾವ ಮಕ್ಕಳು ಎಷ್ಟು ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿದ್ದು ಮಿಲನ ಮಾಡುತ್ತಾರೆಯೋ ಆ ಪ್ರತಿಯೊಂದು ಮಗುವಿಗೂ ಯಾವ ವರದಾನವು ಬೇಕೋ ಆ ವರದಾನ ಸಹಜವಾಗಿ ಪ್ರಾಪ್ತಿ ಆಗುತ್ತದೆ. ವರದಾನದ  ಭಂಡಾರ ತೆರೆದೇ ಇದೆ, ಯಾರು ಎಷ್ಟು ಬೇಕಾದರೆ ಅಷ್ಟು ಪ್ರಾಪ್ತಿ ಮಾಡಿಕೊಳ್ಳುವ ಶ್ರೇಷ್ಠ ದಿನವಾಗಿದೆ. ಸ್ನೇಹದ ಬದಲಾಗಿ ಸಹಜ ವರದಾನಗಳ     ಉಡುಗೊರೆಯು ಪ್ರಾಪ್ತಿಯಾಗುತ್ತದೆ. ಉಡುಗೊರೆಗಾಗಿ ಪರಿಶ್ರಮ ಪಡುವ ಅವಶ್ಯಕತೆ ಇರುವುದಿಲ್ಲ, ಸಹಜವಾಗಿ ಪ್ರಾಪ್ತಿಯಾಗುತ್ತದೆ. ಉಡುಗೊರೆಯನ್ನು ಬೇಡುವುದಲ್ಲ, ಸ್ವತಹವಾಗಿಯೇ ಪ್ರಾಪ್ತಿಯಾಗುತ್ತದೆ ಪುರುಷಾರ್ಥದಿಂದ ವರದಾನದ ಅನುಭೂತಿ ಪ್ರಾಪ್ತಿಯಾಗುವುದು ಬೇರೆ ಮಾತಾಗಿದೆ ಆದರೆ ಇಂದಿನ ದಿನ ಬ್ರಹ್ಮಾ ತಾಯಿ ಸ್ನೇಹದ ರಿಟರ್ನಾಗಿ ವರದಾನವನ್ನು ಕೊಡುತ್ತಾರೆ. ಇಂದು ಎಲ್ಲರೂ ಸಹಜ ವರದಾನ ಪ್ರಾಪ್ತಿಯಾಗುವ ಅನುಭೂತಿಯನ್ನು ಮಾಡಿದ್ದೀರಾ? ಈಗಲೂ ಸಹ ಸತ್ಯ ಹೃದಯದ ಸ್ನೇಹದ ಬದಲಾಗಿ ವರದಾನವನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ವರದಾನವನ್ನು ಪ್ರಾಪ್ತಿ ಮಾಡುವ ಸಾಧನವು ಹೃದಯದ ಸ್ನೇಹವೇ ಆಗಿದೆ. ಎಲ್ಲಿ ಹೃದಯದ ಸ್ನೇಹವಿರುತ್ತದೆಯೋ ಆ ಸ್ನೇಹ ಎಂತಹ ಖಜಾನೆಯಾಗಿದೆ ಎಂದರೆ ಆ ಖಜಾನೆಯ ಮೂಲಕ, ಬಾಪ್‌ದಾದಾರವರ ಮೂಲಕ ಯಾವ ಅವಿನಾಶಿ ವರದಾನವನ್ನಾದರೂ ಪ್ರಾಪ್ತಿ ಮಾಡಿಕೊಳ್ಳಬಹುದು. ಇಂತಹ ಸ್ನೇಹದ ಖಜಾನೆ ಪ್ರತಿಯೊಂದು ಮಗುವಿನ ಬಳಿ ಇದೆಯೇ? ಸ್ನೇಹದ ಖಜಾನೆ ಇದ್ದುದಕ್ಕಾಗಿಯೇ ತಲುಪಿದ್ದೀರಲ್ಲವೇ! ಸ್ನೇಹವೇ ಸೆಳೆದುಕೊಂಡು ತಂದಿದೆ ಹಾಗೂ ಸ್ನೇಹದಲ್ಲಿ ಇರುವುದು ಬಹಳ ಸಹಜವಾಗಿದೆ . ಪುರುಷಾರ್ಥದ ಪರಿಶ್ರಮ ಮಾಡಬೇಕಾಗಿಲ್ಲ ಏಕೆಂದರೆ ಸ್ನೇಹದ ಅನುಭವ ಪ್ರತಿಯೊಂದು ಆತ್ಮನಿಗೂ ಆಗಿರುತ್ತದೆ. ಈಗ ತುಂಡು ತುಂಡಾಗಿರುವ ಸ್ನೇಹವಿದೆ, ಸ್ವಲ್ಪ ಅಲ್ಲಿ, ಸ್ವಲ್ಪ ಇಲ್ಲಿ ಈ ರೀತಿ ಹರಡಿಕೊಂಡಿರುವ ಸ್ನೇಹವನ್ನು ಒಬ್ಬರೊಂದಿಗೆ ಜೋಡಿಸಿದ್ದೀರಿ ಏಕೆಂದರೆ ಮೊದಲು ಬೇರೆ ಬೇರೆ ಸಂಬಂಧಗಳಿದ್ದವು, ಈಗ ಒಬ್ಬರೊಂದಿಗೆ ಸರ್ವ ಸಂಬಂಧಗಳು ಇವೆ. ಆದ್ದರಿಂದ ಒಬ್ಬನೊಂದಿಗೆ ಸ್ನೇಹವಿದೆ. ಆದ್ದರಿಂದ ಪ್ರತಿಯೊಬ್ಬರೂ  ನನ್ನ ಬಾಬಾ ಎಂದು ಹೇಳುತ್ತಾರೆ. ಸ್ನೇಹ ಯಾರೊಂದಿಗೆ ಇರುತ್ತದೆ? ನನ್ನದರೊಂದಿಗೆ. ಎಲ್ಲರೂ ನನ್ನ ಬಾಬಾ ಎಂದು ಹೇಳುತ್ತೀರಲ್ಲವೇ ಅಥವಾ ದಾದಿಯರ ಬಾಬಾ,  ಮಹಾರಥಿಯರ ಬಾಬಾ ಆಗಿದ್ದಾರೆಯೇ? ಎಲ್ಲರ ಬಾಬಾ ಆಗಿದ್ದಾರೆ ಅಲ್ಲವೇ! ಇಂದಿನ ದಿನ ಎಷ್ಟು ಬಾರಿ ಪ್ರತಿಯೊಬ್ಬ ಮಗು ಹೃದಯದಿಂದ

- ನನ್ನ ಬಾಬಾ, ನನ್ನ ಬಾಬಾ ಎಂದು ಹೇಳಿದ್ದೀರಿ? ಎಲ್ಲರೂ ನನ್ನ ಬಾಬಾ , ನನ್ನ ಬಾಬಾ ಎಂದು ಹೇಳಿ ಆತ್ಮಿಕ ವಾರ್ತಾಲಾಪ ಮಾಡಿದ್ದೀರಿ ಅಲ್ಲವೇ! ಇಡೀ ದಿನ ಏನು ಮಾಡಿದ್ದೀರಿ? ಸ್ನೇಹದ ಪುಷ್ಪವನ್ನು ಬಾಪ್‌ದಾದಾರವರಿಗೆ ಅರ್ಪಣೆ ಮಾಡಿದ್ದೀರಿ. ಬಾಪ್‌ದಾದಾರವರ ಬಳಿ ಬಹಳ ಒಳ್ಳೊಳ್ಳೆಯ ಸ್ನೇಹದ ಪುಷ್ಪಗಳು ತಲುಪುತ್ತಿದ್ದವು. ಸ್ನೇಹವಂತೂ ಬಹಳ ಚೆನ್ನಾಗಿತ್ತು, ಈಗ ಬಾಬಾರವರು ಹೇಳುತ್ತಾರೆ ಸ್ನೇಹದ ಸ್ವರೂಪವನ್ನು ಸಾಕರದಲ್ಲಿ ಪ್ರತ್ಯಕ್ಷ ಮಾಡಿ. ಇದೇ ಸಮಾನರಾಗುವುದಾಗಿದೆ. **ಈಗ ಈ ಸಮಾನರಾಗುವ ಲಕ್ಷ್ಯವಂತೂ ಎಲ್ಲರ ಬಳಿ ಇದೆ. ಈಗ ಸಾಕಾರದಲ್ಲಿ ಈ ಲಕ್ಷಣಗಳು ಕಂಡು ಬರಲಿ. ಯಾರನ್ನು ನೋಡಿದರೂ, ಯಾರು ಭೇಟಿಯಾದರೂ, ಸಂಬಂಧ ಸಂಪರ್ಕದಲ್ಲಿ ಬಂದರೂ, ಅವರಿಗೆ ಪರಮಾತ್ಮ ತಂದೆಯಂತಹ, ಬ್ರಹ್ಮಾತಂದೆಯ ಗುಣಗಳು/ ಲಕ್ಷಣಗಳು ನಿಮ್ಮ ಮುಖ ಮತ್ತು ಮೂರ್ತಿಯಲ್ಲಿ ಕಾಣಿಸಬೇಕು. ಇವರ ನಯನಗಳು, ಇವರ ಮಾತು, ಇವರ ವೃತ್ತಿ ಹಾಗೂ ಪ್ರಕಂಪನಗಳು (ತರಂಗ) ಅತೀತ(ಭಿನ್ನ)ವಾಗಿವೆ ಎಂದು ಅನುಭವ ಮಾಡಬೇಕು**. ಮಧುಬನಕ್ಕೆ ಬಂದರೆ ಬ್ರಹ್ಮಾ ತಂದೆಯ ಕರ್ಮ ಸಾಕಾರದಲ್ಲಿ ಇರುವ ಕಾರಣ, ಈ ಭೂಮಿಯಲ್ಲಿ ತಪಸ್ಸು, ಕರ್ಮ ಹಾಗೂ ತ್ಯಾಗದ ತರಂಗಗಳು ಸಮಾವೇಶವಾಗಿರುವ ಕಾರಣ ಈ ಪ್ರಪಂಚ ಅತೀತವಾಗಿದೆ ಎಂದು ಸಹಜವಾಗಿ ಅನುಭವವಾಗುತ್ತದೆ ಏಕೆಂದರೆ ಬ್ರಹ್ಮಾ ತಂದೆ ಹಾಗೂ ವಿಶೇಷ ಮಕ್ಕಳ ತರಂಗಗಳಿಂದ ಅಲೌಕಿಕವಾದ ವಾಯುಮಂಡಲ ತಯಾರಾಗಿಯೇ ಇದೆ. ಇದೇ ರೀತಿ ಯಾವ ಮಕ್ಕಳು ಎಲ್ಲಿದ್ದರೂ, ಯಾವುದೇ ಕರ್ಮ ಕ್ಷೇತ್ರದಲ್ಲಿದ್ದರೂ, ಪ್ರತಿಯೊಂದು ಮಗುವಿನಿಂದ ತಂದೆಯ ಸಮಾನ ಗುಣ, ಕರ್ಮ ಹಾಗೂ ಶ್ರೇಷ್ಠವೃತ್ತಿಯ ವಾಯುಮಂಡಲ ಅನುಭವದಲ್ಲಿ ಬರುವುದನ್ನೇ ಬಾಪ್‌ದಾದಾರವರು ತಂದೆಯ ಸಮಾನರಾಗುವುದು ಎಂದು ಕರೆಯುತ್ತಾರೆ. ಇದುವರೆಗೂ ತಂದೆಯ ಸಮಾನರಾಗಲೇಬೇಕು ಎಂಬ ಯಾವ ಸಂಕಲ್ಪವಿದೆಯೋ ಅದು ಈಗ ಚಹರೆ ಹಾಗೂ ಚಲನೆಯಿಂದ ಕಾಣಿಸಲಿ. **ಸಂಬಂಧ ಸಂಪರ್ಕದಲ್ಲಿ ಬರುವವರೆಲ್ಲರ ಹೃದಯದಿಂದ " ಈ ಆತ್ಮರು ತಂದೆಯ ಸಮಾನರಾಗಿದ್ದಾರೆ" ಎಂಬ ಶಬ್ದ ಹೊರಬರಲಿ**. (ಮಧ್ಯ ಮಧ್ಯದಲ್ಲಿ ಕೆಮ್ಮು ಬರುತ್ತಿದೆ) ಇಂದು ಮೈಕ್ ಸರಿ ಇಲ್ಲ, ಮಿಲನವನ್ನಂತೂ ಮಾಡಬೇಕಲ್ಲವೇ. ಇವರು ಸಹ ಮೈಕ್ ಆಗಿದ್ದಾರೆ ಅಲ್ಲವೇ, ಈ ಮೈಕ್ ನಡೆಯದಿದ್ದರೆ ಈ ಮೈಕ್ ಸಹ ಕೆಲಸಕ್ಕೆ ಬರುವುದಿಲ್ಲ. ಯಾವುದೇ ತೊಂದರೆ ಇಲ್ಲ ಇದು ಸಹ ಹವಾಮಾನದ ಫಲವಾಗಿದೆ.

ಹಾಗಾದರೆ ಈಗ ಎಲ್ಲಾ ಮಕ್ಕಳಿಂದ ಈ ಪ್ರತ್ಯಕ್ಷತೆಯನ್ನು ಬಯಸುತ್ತಾರೆ, ಹೇಗೆ ವಾಣಿಯ ಮೂಲಕ ಪ್ರತ್ಯಕ್ಷತೆಯನ್ನು ಮಾಡಿದಾಗ ವಾಣಿಯ ಪ್ರಭಾವ ಬೀರುತ್ತದೆಯೋ ಅದಕ್ಕಿಂತ ಹೆಚ್ಚು ಪ್ರಭಾವ ಗುಣ ಹಾಗೂ ಕರ್ಮಗಳಿಂದ ಬೀರುತ್ತದೆ. ಪ್ರತಿಯೊಬ್ಬ ಮಗುವಿನ ನಯನಗಳಿಂದ - ಇವರ ನಯನಗಳಲ್ಲಿ ಯಾವುದೋ ವಿಶೇಷತೆ ಇದೆ ಎಂಬ ಅನುಭವವಾಗಲಿ. ಸಾಧಾರಣ ಅನುಭವ ಆಗದಿರಲಿ ಅಲೌಕಿಕವಾಗಿರಲಿ. ಅವರ ಮನಸ್ಸಿನಲ್ಲಿ ಈ ರೀತಿ ಹೇಗಾದರು? ಎಲ್ಲಿಂದ ಆದರು? ಎಂಬ ಪ್ರಶ್ನೆಗಳು ಬರಲಿ. ಸ್ವಯಂ ಸಹ ಯೋಚಿಸಲಿ ಹಾಗೂ ಮಾಡುವವರು ಯಾರು ಎಂದು ಕೇಳಲಿ? ಹೇಗೆ ಇತ್ತೀಚಿನ ಸಮಯದಲ್ಲಿಯೂ ಸಹ ಯಾವುದಾದರೂ ಒಂದು ಒಳ್ಳೆಯ ವಸ್ತುವನ್ನು ನೋಡಿದರೆ, ಇದನ್ನು ತಯಾರು ಮಾಡಿದವರು ಯಾರು ಎಂಬ ಪ್ರಶ್ನೆ ಮನಸ್ಸಿನಲ್ಲಿ ಬರುತ್ತದೆಯೋ ಅದೇ ರೀತಿ ತಾವೂ ಸಹ ತಂದೆಯ ಸಮಾನರಾಗುವ ಸ್ಥಿತಿಯ ಮೂಲಕ ತಂದೆಯ ಪ್ರತ್ಯಕ್ಷತೆಯನ್ನು ಮಾಡಿ. ಇತ್ತೀಚೆಗೆ ಬಹುತೇಕ ಆತ್ಮರು- ಈ ಸಾಕಾರ

ಸೃಷ್ಟಿಯಲ್ಲಿ, ಈ ವಾತಾವರಣದಲ್ಲಿ ಇದ್ದರೂ ಸಹ ಈ ರೀತಿ ಯಾರಾದರೂ ಆಗಲು ಸಾಧ್ಯವೇ? ಎಂದು ಯೋಚಿಸುತ್ತಾರೆ. ನೀವು ಅವರಿಗೆ ಆಗಲು ಸಾಧ್ಯ ಹಾಗೂ ನಾವು ಆಗಿದ್ದೇವೆ ಎಂದು ಇದನ್ನು ಪ್ರತ್ಯಕ್ಷದಲ್ಲಿ ಮಾಡಿ ತೋರಿಸಿರಿ. ಇತ್ತೀಚೆಗೆ ಪ್ರತ್ಯಕ್ಷ ಪ್ರಮಾಣವನ್ನು ಹೆಚ್ಚು ನಂಬುತ್ತಾರೆ. ಕೇಳಿಸಿಕೊಳ್ಳುವುದಕ್ಕಿಂತ ಜಾಸ್ತಿ ನೋಡಲು ಬಯಸುತ್ತಾರೆ ಹಾಗಾದರೆ ನಾಲ್ಕಾರು ಕಡೆ ಎಷ್ಟು ಮಕ್ಕಳಿದ್ದಾರೆ, ಪ್ರತಿಯೊಂದು ಮಗು ತಂದೆಯ ಸಮಾನ ಪ್ರತ್ಯಕ್ಷ ಪ್ರಮಾಣರಾಗಿ ಬಿಟ್ಟರೆ ತಿಳಿದುಕೊಳ್ಳುವುದು ಹಾಗೂ ನಂಬುವುದರಲ್ಲಿ ಪರಿಶ್ರಮ ಎನಿಸುವುದಿಲ್ಲ. ನಂತರ ತಮ್ಮ ಪ್ರಜೆಗಳು ಬಹಳ ಬೇಗ ಬೇಗ ತಯಾರಾಗಿ ಬಿಡುವರು. ಕಡಿಮೆ ಪರಿಶ್ರಮ, ಕಡಿಮೆ ಸಮಯ ಹಾಗೂ ಪ್ರತ್ಯಕ್ಷ ಪ್ರಮಾಣ ಅನುಭವ ಮಾಡುವುದರಿಂದ ಪ್ರಜೆಯ ಸ್ಟಾಂಪ್(ಮುದ್ರಣ) ಬೀಳುತ್ತಾ ಹೋಗುವುದು. ನೀವು ರಾಜಾರಾಣಿ ಆಗುವವರಾಗಿದ್ದೀರಿ ಅಲ್ಲವೇ!

ಬಾಪ್‌ದಾದಾರವರು ಒಂದು ಮಾತಿನ ಮೇಲೆ ಮತ್ತೊಮ್ಮೆ ಗಮನವನ್ನು ತರಿಸುತ್ತಿದ್ದಾರೆ- ವರ್ತಮಾನ ವಾಯುಮಂಡಲದ ಅನುಸಾರ ಮನಸ್ಸಿನಲ್ಲಿ, ಹೃದಯದಲ್ಲಿ ಈಗ ವೈರಾಗ್ಯವೃತ್ತಿಯನ್ನು ಪ್ರತ್ಯಕ್ಷ ಮಾಡಿಕೊಳ್ಳಿ. ಬಾಪ್‌ದಾದಾರವರು ಪ್ರತಿಯೊಂದು ಮಗುವಿಗೂ ಭಲೇ ಪ್ರವೃತ್ತಿಯಲ್ಲಿರಲಿ, ಸೇವಾ ಕೇಂದ್ರದಲ್ಲಿರಲಿ, ಎಲ್ಲೇ ಇರಲಿ ಸ್ಥೂಲ ಸಾಧನ ಪ್ರತಿಯೊಬ್ಬರಿಗೂ ಕೊಡಲಾಗಿದೆ, ತಿನ್ನಲು, ಕುಡಿಯಲು ಹಾಗು ಉಳಿಯಲು ಸಾಧನ ಇಲ್ಲದಿರುವಂತಹ ಯಾವುದೇ ಮಕ್ಕಳಿಲ್ಲ. ಬೇಹದ್ದಿನ ವೈರಾಗ್ಯವೃತ್ತಿಯಲ್ಲಿ ಇರುತ್ತಾ ಬೇಕಾಗುವ ಅವಶ್ಯಕ ಸಾಧನಗಳು ಎಲ್ಲರ ಬಳಿ ಇದೆ. ಒಂದು ವೇಳೆ ಯಾರಿಗಾದರೂ ಇವುಗಳ ಕೊರತೆ ಇದ್ದರೆ ಅವರ ಸೋಮಾರಿತನ ಅಥವಾ ಆಲಸ್ಯ(ನಿರ್ಲಕ್ಷ್ಯ)ವೇ ಅದರ ಕಾರಣವಾಗಿದೆ. ಬಾಕಿ ಡ್ರಾಮಾ ಅನುಸಾರ ಬಾಪ್‌ದಾದಾರವರು ತಿಳಿದುಕೊಂಡಿದ್ದಾರೆ- ಅವಶ್ಯಕ ಸಾಧನ ಎಲ್ಲರ ಬಳಿ ಇದೆ. ಏನೆಲ್ಲಾ ಅವಶ್ಯಕ ಸಾಧನಗಳಿವೆಯೋ ಅವೆಲ್ಲವೂ ನಡೆಯಲೇಬೇಕಾಗಿದೆ. ಆದರೆ ಕೆಲವೊಂದು ಕಡೆ ಅವಶ್ಯಕತೆಗಿಂತ ಹೆಚ್ಚು ಸಾಧನಗಳಿವೆ, ಸಾಧನೆ (ತಪಸ್ಸು) ಕಡಿಮೆ ಇದೆ ಹಾಗೂ ಸಾಧನದ ಪ್ರಯೋಗ ಮಾಡುವುದು ಅಥವಾ ಮಾಡಿಸುವುದು ಜಾಸ್ತಿ ಇದೆ ಆದ್ದರಿಂದ **ಬಾಪ್‌ದಾದಾರವರು ತಂದೆಯ ಸಮಾನರಾಗುವ ಈ ದಿವಸದಂದು ವಿಶೇಷ ಅಂಡರ್ ಲೈನ್ ಮಾಡಿಸುತ್ತಿದ್ದಾರೆ- ಸಾಧನಗಳ ಪ್ರಯೋಗದ ಅನುಭವ ಬಹಳಷ್ಟು ಮಾಡಿದ್ದೀರಿ, ಏನೆಲ್ಲಾ ಮಾಡಿದ್ದೀರೋ ಅದೆಲ್ಲಾ ಚೆನ್ನಾಗಿ ಮಾಡಿದ್ದೀರಿ, ಈಗ ಸಾಧನೆಯನ್ನು ಹೆಚ್ಚಿಸುವುದು ಅರ್ಥಾತ್, ಬೇಹದ್ದಿನ ವೈರಾಗ್ಯವೃತ್ತಿಯನ್ನು ತಂದುಕೊಳ್ಳಿರಿ. ಬ್ರಹ್ಮಾ ತಂದೆಯನ್ನು ನೋಡಿದಿರಿ, ಅಂತಿಮ ಘಳಿಗೆಯವರೆಗೂ ಮಕ್ಕಳಿಗೆ ಬಹಳಷ್ಟು ಸಾಧನಗಳನ್ನು ಕೊಟ್ಟರು ಆದರೆ ಸ್ವಯಂ ಸಾಧನಗಳ ಪ್ರಯೋಗದಿಂದ ದೂರವಿದ್ದರು. ಸಾಧನಗಳು ಇದ್ದರೂ ಸಹ ದೂರವಿರುವುದಕ್ಕೇ ವೈರಾಗ್ಯ ಎಂದು ಹೇಳಲಾಗುತ್ತದೆ. ಆದರೆ ನಮ್ಮ ಬಳಿ ಏನೂ ಇಲ್ಲ ಮತ್ತು ನಮಗಂತೂ ವೈರಾಗ್ಯವಿದೆ, ನಾವಂತೂ ವೈರಾಗೀ ಆಗಿದ್ದೇವೆ, ಎಂದರೆ ಅದು ಹೇಗೆ ಆಗಲು ಸಾಧ್ಯ?** ಈ ಮಾತಂತೂ ಬೇರೆಯಾಗಿದೆ. ಎಲ್ಲವೂ ಇದ್ದರೂ ಸಹ ಜ್ಞಾನ ಹಾಗೂ ವಿಶ್ವ ಕಲ್ಯಾಣದ ಭಾವನೆಯಿಂದ, ತಂದೆಯನ್ನು, ಸ್ವಯಂ ಅನ್ನು ಪ್ರತ್ಯಕ್ಷ ಮಾಡುವ ಭಾವನೆಯಿಂದ ಈಗ ಸಾಧನಗಳ ಬದಲಾಗಿ ಬೇಹದ್ದಿನ ವೈರಾಗ್ಯವೃತ್ತಿ ಇರಲಿ. ಹೇಗೆ ಸ್ಥಾಪನೆಯ ಆದಿಯಲ್ಲಿ ಸಾಧನಗಳು ಕಡಿಮೆ ಇರಲಿಲ್ಲ ಆದರೆ ವೈರಾಗ್ಯವೃತ್ತಿಯ ಭಟ್ಟಿಯಲ್ಲಿ ಬಿದ್ದಿದ್ದವು. 14 ವರ್ಷ ಯಾವ ತಪಸ್ಸನ್ನು ಮಾಡಿದರು, ಅಲ್ಲಿ ಬೇಹದ್ದಿನ ವೈರಾಗ್ಯವೃತ್ತಿಯ ವಾಯುಮಂಡಲವಿತ್ತು. ಬಾಪ್‌ದಾದಾರವರು ಈಗ ಬಹಳಷ್ಟು ಸಾಧನಗಳನ್ನು ಕೊಟ್ಟಿದ್ದಾರೆ,

ಈಗ ಸಾಧನಗಳ ಯಾವುದೇ ಕೊರತೆ ಇಲ್ಲ ಆದರೆ ಎಲ್ಲಾ ಇದ್ದರೂ ಸಹ ಬೇಹದ್ದಿನ ವೈರಾಗ್ಯವಿರಲಿ. ವಿಶ್ವದ ಆತ್ಮರ ಕಲ್ಯಾಣದ ಪ್ರತಿಯೂ ಸಹ ಈ ಸಮಯ ಈ ವಿಧಿಯ ಅವಶ್ಯಕತೆ ಇದೆ ಏಕೆಂದರೆ ನಾಲ್ಕಾರು ಕಡೆ ಇಚ್ಛೆಗಳು ವೃದ್ಧಿಯಾಗುತ್ತಿದೆ, ಇಚ್ಛೆಗಳ ವಶವಾಗಿ ಆತ್ಮರೂ ತೊಂದರೆಯಲ್ಲಿದ್ದಾರೆ, ಪದಮಪತಿ ಆಗಿದ್ದಾರೆ ಆದರೂ ಅವರು ಸಹ ಇಚ್ಛೆಗಳಿಂದಲೇ ತೊಂದರೆಯಲ್ಲಿದ್ದಾರೆ. ವಾಯುಮಂಡಲದಲ್ಲಿ ಆತ್ಮರ ತೊಂದರೆಯ ವಿಶೇಷ ಕಾರಣ ಈ ಹದ್ದಿನ ಇಚ್ಛೆಗಳೇ ಆಗಿವೆ. ಈಗ ತಾವು ತಮ್ಮ ಬೇಹದ್ದಿನ ವೈರಾಗ್ಯದ ವೃತ್ತಿಯ ಮೂಲಕ ಆ ಆತ್ಮರಲ್ಲಿಯೂ ಸಹ ವೈರಾಗ್ಯವೃತ್ತಿಯನ್ನು ಹರಡಿಸಿ. ನಿಮ್ಮ ವೈರಾಗ್ಯವೃತ್ತಿಯ ವಾಯುಮಂಡಲದ ಹೊರತು ಆತ್ಮರು ಸುಖದಿಂದ ಇರಲು, ಶಾಂತರಾಗಲು ಸಾಧ್ಯವಿಲ್ಲ. ತೊಂದರೆಯಿಂದ ಬಿಡುಗಡೆಯಾಗಲು ಸಾಧ್ಯವಿಲ್ಲ. ನೀವು ವೃಕ್ಷದ ಕಾಂಡವಾಗಿದ್ದೀರಿ, ಬ್ರಾಹ್ಮಣರ ಸ್ಥಾನ ವೃಕ್ಷದಲ್ಲಿ ಎಲ್ಲಿ ತೋರಿಸಲಾಗುತ್ತದೆ? ಬೇರಿನಲ್ಲಿ ತೋರಿಸಲಾಗುತ್ತದೆ ಅಲ್ಲವೇ! ಎಂದ ಮೇಲೆ ನೀವು ಫೌಂಡೇಶನ್(ಅಡಿಪಾಯ) ಆಗಿದ್ದೀರಿ ನಿಮ್ಮ ಅಲೆ ವಿಶ್ವದಲ್ಲಿ ಹರಡುತ್ತದೆ ಆದ್ದರಿಂದ ಬಾಪ್‌ದಾದಾರವರು ವಿಶೇಷ ಸಾಕಾರದಲ್ಲಿ ಬ್ರಹ್ಮಾ ತಂದೆಯ ಸಮಾನ ಆಗುವ ವಿಧಿ, ವೈರಾಗ್ಯವೃತ್ತಿಯ ಕಡೆಗೆ ವಿಶೇಷ ಗಮನವನ್ನು ತರಿಸುತ್ತಿದ್ದಾರೆ. ಪ್ರತಿಯೊಬ್ಬರಿಗೂ ಇವರು ಸಾಧನಗಳ ವಶರಾಗಿಲ್ಲ, ಸಾಧನೆಯಲ್ಲಿ ಇರುವಂತಹವರು ಎಂದು ಅನುಭವವಾಗಲಿ. ಎಲ್ಲವೂ ಇದ್ದರೂ ವೈರಾಗ್ಯವೃತ್ತಿ ಇರಲಿ. ಅವಶ್ಯಕವಾದ ಸಾಧನಗಳನ್ನು ಬಳಸಿ ಆದರೆ ಎಷ್ಟು ಸಾಧ್ಯವೋ ಅಷ್ಟು ಹೃದಯದ ವೈರಾಗ್ಯವೃತ್ತಿಯಿಂದ ಬಳಸಬೇಕೇ ಹೊರತು ಸಾಧನೆಗಳಿಗೆ ವಶೀಭೂತರಾಗಿ ಅಲ್ಲ. ಈಗ ಸಾಧನೆಯ ವಾಯುಮಂಡಲವನ್ನು ನಾಲ್ಕಾರು ಕಡೆ ತಯಾರು ಮಾಡಿ. ಸಮಯದ ಸಮೀಪತೆಯ ಪ್ರಮಾಣ ಈಗ ಬೇಹದ್ದಿನ ವೈರಾಗ್ಯವೇ ಸತ್ಯವಾದ ತಪಸ್ಸು ಹಾಗೂ ಸಾಧನೆಯಾಗಿದೆ. ಸೇವೆಯ ವಿಸ್ತಾರ ಈ ವರ್ಷದಲ್ಲಿ ಬಹಳ ಮಾಡಿದ್ದೀರಿ. ಈ ವರ್ಷ ನಾಲ್ಕಾರು ಕಡೆ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಮಾಡಿದ್ದೀರಿ ಹಾಗೂ ಸೇವೆಯಿಂದ ಸಹಯೋಗಿ ಆತ್ಮರು ಸಹ ಬಹಳಷ್ಟು ತಯಾರಾಗಿದ್ದಾರೆ, ಸಮೀಪ ಬಂದಿದ್ದಾರೆ, ಸಂಪರ್ಕದಲ್ಲಿ ಬಂದಿದ್ದಾರೆ, ಆದರೆ ಕೇವಲ ಸಹಯೋಗಿಯನ್ನಾಗಿ ಮಾಡಬೇಕಾ? ಕೇವಲ ಇಲ್ಲಿಯವರೆಗೆ ಇಡಬೇಕಾ? ಒಳ್ಳೊಳ್ಳೆಯ ಸಹಯೋಗಿ ಆತ್ಮರಿದ್ದಾರೆ, ಈಗ ಆ ಸಹಯೋಗಿ ಕ್ವಾಲಿಟಿ( ಗುಣಮಟ್ಟದ) ಆತ್ಮರನ್ನು ಇನ್ನಷ್ಟು ಸಂಬಂಧದಲ್ಲಿ ತೆಗೆದುಕೊಂಡು ಬನ್ನಿ. ಅನುಭವ ಮಾಡಿಸಿ, ಸಹಯೋಗಿಯಿಂದ ಸಹಜಯೋಗಿ ಆಗಿ ಬಿಡಲಿ. ಇದಕ್ಕಾಗಿ ಒಂದನೆಯದು ಸಾಧನೆಯ ವಾಯುಮಂಡಲ ಹಾಗೂ ಎರಡನೆಯದು ಬೇಹದ್ದಿನ ವೈರಾಗ್ಯವೃತ್ತಿಯ ವಾಯುಮಂಡಲ ಇರಲಿ ಆಗ ಇದರಿಂದ ಸಹಜವಾಗಿ ಸಹಯೋಗಿಯು ಸಹಜಯೋಗಿಯಾಗಿ ಬಿಡುವರು. ಅವರ ಸೇವೆ ಭಲೆ ಮಾಡುತ್ತಿರಿ ಆದರೆ ಜೊತೆಯಲ್ಲಿ ಸಾಧನೆ, ತಪಸ್ಸಿನ ವಾಯುಮಂಡಲ ಅವಶ್ಯಕವಾಗಿದೆ .

ಈಗ ನಾಲ್ಕಾರು ಕಡೆ ಶಕ್ತಿಶಾಲಿ ತಪಸ್ಸು ಮಾಡಬೇಕು , ಈ ತಪಸ್ಸು ಮನಸಾ ಸೇವೆಗೆ ನಿಮಿತ್ತವಾಗಬೇಕು, ಇಂತಹ ಶಕ್ತಿಶಾಲಿ ಸೇವೆ ಈಗ ತಪಸ್ಸಿನಿಂದ ಮಾಡಬೇಕು. ಈಗ **ಮನಸಾ ಸೇವೆ ಅರ್ಥಾತ್ ಸಂಕಲ್ಪದ ಮೂಲಕ ಸೇವೆಯ ಪ್ರೇರಣೆ ಬರಬೇಕು, ಈಗ ಇದರ ಅವಶ್ಯಕತೆ ಇದೆ.** ಸಮಯ ಸಮೀಪ ಬರುತ್ತಿದೆ, ನಿರಂತರ ಸ್ಥಿತಿಯ ಹಾಗೂ ನಿರಂತರ ಶಕ್ತಿಶಾಲಿ ವಾಯುಮಂಡಲದ ಅವಶ್ಯಕತೆ ಇದೆ. ತಂದೆಯ ಸಮಾನರಾಗಬೇಕೆಂದರೆ ಮೊದಲು ಬೇಹದ್ದಿನ

ವೈರಾಗ್ಯವೃತ್ತಿಯನ್ನು ಧಾರಣೆ ಮಾಡಿ. ಅಂತ್ಯದವರೆಗೂ ಬ್ರಹ್ಮಾ ತಂದೆಯಲ್ಲಿ ಇದೇ ವಿಶೇಷತೆಯನ್ನು ನೋಡಿದಿರಿ. ವೈಭವದಲ್ಲಿಯೂ ಮೋಹ ಇರಲಿಲ್ಲ, ಮಕ್ಕಳಲ್ಲಿಯೂ ಇರಲಿಲ್ಲ.... ಎಲ್ಲರೊಂದಿಗೆ ವೈರಾಗ್ಯವೃತ್ತಿ. ಹಾಗಾದರೆ ಇಂದಿನ ದಿನದ ತಂದೆಯ ಸಮಾನರಾಗುವ ಪಾಠವನ್ನು ಪಕ್ಕಾ ಮಾಡಿಕೊಳ್ಳಿ. ಬ್ರಹ್ಮಾ ತಂದೆಯ ಸಮಾನ ಆಗಲೇಬೇಕು. ಇಂತಹ ದೃಢ ನಿಶ್ಚಯವು ಅವಶ್ಯವಾಗಿ ಮುಂದುವರೆಸುವುದು.

ಇಂದು ಉಡುಗೊರೆ ಸಿಗಬೇಕಲ್ಲವೇ ಎಂದು ಮಕ್ಕಳೆಲ್ಲರೂ ಯೋಚಿಸುತ್ತಿದ್ದಾರೆ. ಈಗ ನಾಲ್ಕೂ ಕಡೆಯ ಮಕ್ಕಳೆಲ್ಲರೂ ಇಲ್ಲ. ಕೇವಲ ಇಲ್ಲಿಗೆ ಬಂದಿರುವ ನಿಮಗೆ ಉಡುಗೊರೆಯನ್ನು ಕೊಡಬೇಕೇ? ಪ್ರೈಸಂತು ಇದೆ ಆದರೆ ಬಾಪ್‌ದಾದಾ ಹೇಳುತ್ತಿದ್ದಾರೆ- ಪ್ರತಿಯೊಬ್ಬರು ಇಡೀ ವರ್ಷ ಸರ್ವ ಸಂಬಂಧಗಳಿಂದ ಮುಕ್ತರಾಗಿ ಇರಬೇಕು ಪಟ್ಟಿಯನ್ನು ತೆಗೆಯುತ್ತೀರಲ್ಲವೇ ಎಷ್ಟು ಸಂಬಂಧಗಳು ಬಂದಿವೆ. 18 ಬಂಧನಗಳು, 18 ಬಂಧನಗಳಿಂದ ಸ್ವಪ್ನದಲ್ಲಿಯೂ ಮುಕ್ತರಾಗಬೇಕು ಸ್ವಪ್ನದಲ್ಲಿಯೂ ಯಾವುದೇ ಬಂಧನದ ರೂಪುರೇಖೆ ಇರಬಾರದು. ಅಂತಹವರನ್ನೇ ಮುಕ್ತರು ಎಂದು ಕರೆಯುತ್ತಾರೆ. ಕೈಯಂತೂ ಬಹಳ ಸಹಜವಾಗಿ ಎತ್ತುತ್ತಿದ್ದೀರಿ. ತಂದೆಗೆ ತಿಳಿದಿದೆ ಕೈಯನ್ನು ಎತ್ತಿಸಿದರೆ ಬಹಳಷ್ಟು ವಿಧವಾಗಿ ಕೈಯನ್ನು ಎತ್ತುತ್ತಿದ್ದಾರೆ. ಈ ಪರಿಶೀಲನೆಯಿಂದ ಕೈಯನ್ನು ಎತ್ತಲು ತಯಾರಾಗಿದ್ದೀರಾ? ಎಷ್ಟು ಜನ ತಯಾರಾಗಿ ಇರುವಿರೋ, ಯಾರ್ಯಾರು ತಯಾರಾಗಿ ಇರುವಿರೋ ಬಾಪ್‌ದಾದಾರವರಿಗೆ ತಿಳಿದಿದೆ. ಈಗಲೂ ಇನ್ನಷ್ಟು ಅಂತರ್ಮುಖಿಯಾಗಿ ಸೂಕ್ಷ್ಮವಾಗಿ ಪರಿಶೀಲನೆ ಮಾಡಿಕೊಳ್ಳಿರಿ. **ಯಾರಿಗೂ ದುಃಖವನ್ನು ಕೊಡಲಿಲ್ಲ ಎಂಬುದು ಒಳ್ಳೆಯದೇ ಆದರೆ ಸುಖದ ಖಾತೆ ಎಷ್ಟು ಜಮಾ ಆಗಬೇಕೋ ಅಷ್ಟು ಜಮಾ ಆಗಿದೆಯಾ? ಯಾರೊಂದಿಗೂ ಕ್ರೋದ ಮಾಡಿಕೊಳ್ಳುತ್ತಿಲ್ಲ ಆದರೆ ರಾಜೀ ಮಾಡಿಕೊಂಡಿದ್ದೀರಾ? ವ್ಯರ್ಥವನ್ನು ಆಲೋಚಿಸುತ್ತಿಲ್ಲ ಆದರೆ ವ್ಯರ್ಥಕ್ಕೆ ಬದಲು ಅಷ್ಟೇ ಶ್ರೇಷ್ಠ ಸಂಕಲ್ಪಗಳು ಜಮಾ ಆಗಿವೆಯಾ? ಎಲ್ಲರ ಪ್ರತಿ ಶುಭ ಭಾವನೆಯನ್ನು ಇಟ್ಟುಕೊಂಡಿದ್ದೀರಿ ಆದರೆ ಶುಭ ಭಾವನೆಗೆ ಫಲಿತಾಂಶ ಲಭಿಸಿದೆಯಾ? ಅರ್ಥಾತ್ ಅವರು ಬದಲಾದರೂ, ಬದಲಾಗದಿದ್ದರೂ ನೀವು ಅವರೊಂದಿಗೆ ಸಂತುಷ್ಟವಾಗಿ ಇದ್ದೀರಾ?** ಈ ವಿಧವಾಗಿ ನಿಮ್ಮನ್ನು ನೀವು ಸೂಕ್ಷ್ಮವಾಗಿ ಪರಿಶೀಲನೆ ಮಾಡಿಕೊಳ್ಳಿ ಈ ಸೂಕ್ಷ್ಮ ಪರಿಶೀಲನೆಯಲ್ಲಿ ಪಾಸ್ ಆದರೆ ಬಹಳ ಒಳ್ಳೆಯದು. ಹೀಗೆ ಪಾಸ್ ಆಗಿರುವ ಆತ್ಮರು ನಿಮ್ಮ ನಿಮ್ಮ ಸೇವಾಕೇಂದ್ರಗಳಲ್ಲಿ ಮತ್ತು ಎಲ್ಲಾ ವಿಷಯಗಳಲ್ಲಿ ಶೇಕಡಾ ಎಷ್ಟು ಫಲಿತಾಂಶವಿದೆ? ಸುಖವನ್ನು ಎಷ್ಟು ಜನರಿಗೆ ಕೊಟ್ಟಿದ್ದೀರಿ? ಎಷ್ಟು ಜನರನ್ನು ರಾಜೀ ಮಾಡಿಕೊಂಡಿದ್ದೀರಿ? ಕ್ರೋಧಕ್ಕೊಳಗಾದವರನ್ನು ರಾಜೀ ಮಾಡಿಕೊಂಡಿದ್ದೀರಾ ಅಥವಾ ರಾಜಿಯಾಗಿ ಇರುವವರನ್ನೇ ರಾಜೀ ಮಾಡಿಕೊಂಡಿದ್ದೀರಾ ಇವೆಲ್ಲವುಗಳನ್ನು ಪರಿಶೀಲನೆ ಮಾಡಿಕೊಂಡು ಎಲ್ಲದರಲ್ಲಿ ನೀವು ಪಾಸ್ ವಿತ್ ಆನರ್ ಆದರೆ ನಿಮ್ಮ ಹೆಸರನ್ನು ಬರೆದು ನಿಮ್ಮ ಟೀಚರ್ ಗೆ ಕೊಡಿ. ಚಿಕ್ಕ ಚಿಕ್ಕ ಸೇವಾ ಕೇಂದ್ರದವರು ನಿಮಿತ್ತವಾದ ದೊಡ್ಡ ಅಕ್ಕಂದಿರಿಗೆ ಕೊಡಬೇಕು. ಎಲ್ಲವನ್ನು ಸೇರಿಸಿ ಝೋನ್ ನ ಮುಖ್ಯ ಕೇಂದ್ರಕ್ಕೆ ತಲುಪಿಸಬೇಕು ಎಲ್ಲರ ಹೆಸರು ಝೋನ್ ನವರ ಹತ್ತಿರ ನಮೂದಿಸಬೇಕು ಮತ್ತು ಝೋನಿನವರು ಹತ್ತಿರದ ಸ್ಥಾನಗಳಲ್ಲಿರುವ ಆತ್ಮರ ಹೆಸರನ್ನು ಮದುಬನಕ್ಕೆ ಕಳುಹಿಸಬೇಕು ಆನಂತರ ಉಡುಗೊರೆ ಲಭಿಸುತ್ತದೆ ಆನಂತರ ಚಪ್ಪಾಳೆಯನ್ನು ಹೊಡೆಯುತ್ತಾರೆ. ಹೀಗೆ ಪಾಸ್ ವಿತ್ ಆನರ್ ಆದವರಿಗೆ ಉಡುಗೊರೆಯು ಲಭಿಸಲೇಬೇಕು ಅದಂತೂ ಲಭಿಸುತ್ತದೆ ಆದರೆ ಸತ್ಯವಾದ ಮನಸ್ಸಿನಿಂದ ಸತ್ಯವಾದ ತಂದೆಗೆ ನಿಮ್ಮ

ಸತ್ಯವಾದ ಖಾತೆ ತಿಳಿಸಬೇಕು ಮತ್ತು ಉಡುಗೊರೆಯನ್ನು ಪಡೆಯಬೇಕು. ಏಕೆಂದರೆ ಅವರ ಹತ್ತಿರ ಎಲ್ಲರ ಸಂಕಲ್ಪಗಳಂತೂ ತಲುಪುತ್ತವೆಯಲ್ಲವೇ ಕೈಯನ್ನು ಎತ್ತಿರುವವರಲ್ಲಿ ಬಹಳಷ್ಟು ಕಲ್ತಿ ಇರುವಂತೆ ಬಾಪ್‌ದಾದಾ ನೋಡಿದರು ಮತ್ತು ಅರ್ಥ ಮಾಡಿಕೊಳ್ಳದೇ ಕೈಯನ್ನು ಎತ್ತಿ. ಬಿಡುತ್ತಿದ್ದಾರೆ ಹೀಗೆ ಕಲ್ತಿಯಿಂದ ಕೈಯನ್ನು ಎತ್ತಿದರೆ ಬಾಪ್‌ದಾದಾ ಬಹುಮಾನವನ್ನು ಕೊಡದಿದ್ದರೆ ಚೆನ್ನಾಗಿರುವುದಿಲ್ಲ ತಾನೆ? ಆದ್ದರಿಂದ ನಿಯಮಾನಸಾರವಾಗಿ ಪಾಸ್ ವಿತ್ ಆನರ್ ಆದರೆ ಬಹಳ-ಬಹಳ ಮಹಿಮೆ ಲಭಿಸುತ್ತದೆ ಮತ್ತು ಅಂತಹವರ ಹೆಸರು ಬ್ರಾಹ್ಮಣತ್ಮರೆಲ್ಲರಲ್ಲಿ ಪ್ರಸಿದ್ಧವಾಗುತ್ತದೆ ಅಲ್ಲವೇ ಒಳ್ಳೆಯದು. ಹೆಚ್ಚು ಜನ ಬಹಳಷ್ಟು ಶ್ರಮಿಸಿದ್ದಾರೆ ಗಮನವಿದೆ ಆದರೆ ಸಂಪೂರ್ಣ ಎಂಬ ವಿಷಯವನ್ನು ಹೇಳುತ್ತಿದ್ದೇನೆ. ಯಾರಾದರೆ ಶ್ರಮ ಮಾಡಿದ್ದೀರೋ ಅವರಿಗೆ ಇಂದು ಉಡುಗೊರೆಯ ಬದಲು ಶುಭಾಶಯಗಳು. ಆನಂತರ ಉಡುಗೊರೆಯನ್ನು ಕೊಡುತ್ತೇನೆ ಸರಿಯೇ?

ಇನ್ನೊಂದು ವಿಷಯವೇನೆಂದರೆ ಎಲ್ಲಾ ಝೋನ್ ನವರಿಗೂ ಮಾರ್ಚ್ ಗಿಂತ ಮೊದಲೇ ಬಾಪ್‌ದಾದಾ ಫಲಿತಾಂಶವನ್ನು ಕೇಳುತ್ತಾರೆ ಯಾರು ಯಾವ ವಿಧವಾದ ಮೈಕನ್ನು ತಯಾರು ಮಾಡಿದ್ದೀರಿ ಎಂದು. ಇವರು ಮೈಕ್ ಎಂದು ನೀವು ಹೇಳಿಬಿಡುತ್ತೀರಿ ಆದರೆ ಅವರು ಚಿಕ್ಕ ಮೈಕ್ ಆಗುತ್ತಾರೆ. ಕೇವಲ ಒಂದು ನಗರಕ್ಕೆ ಮೈಕ್ ಆದವರು ಬರುತ್ತಾರೆ. ಅವರು ಆ ಪಟ್ಟಣಕ್ಕೆ ಆದರೆ ಝೋನ್ಗೆ ಅಲ್ಲ ಅವರನ್ನೇ ಚಿಕ್ಕ ಮೈಕ್ ಎಂದು ಕರೆಯುತ್ತಾರೆ. ಅಂತಹ ಮೈಕನ್ನು ಯಾರು ತಯಾರು ಮಾಡಿದ್ದೀರಿ ಎಂದು ಬಾಪ್‌ದಾದಾ ಕೇಳುತ್ತಾರೆ. ಒಂದು ವೇಳೆ ಯಾವ ಝೋನಿನವರಾದರೂ ಕಡೆಯ ಮಿಲನಕ್ಕೆ ಬರಲಾಗದಿದ್ದರೆ ಪತ್ರವನ್ನು ಬರೆದು ಕೊನೆಯ ಮಿಲನಕ್ಕೆ ಕಳುಹಿಸಬೇಕು. ಬಂದರೆ ಜೊನ್ನ ಹೆಡ್ಸ್ ಎಲ್ಲರಿಗೆ ಆಹ್ವಾನ. ಒಂದುವೇಳೆ ಬರೆದಿದ್ದರೆ ಅರ್ಥಾತ್ ಯಾವ ಕಾರಣದಿಂದ ಆದರೂ ಬರದಿದ್ದರೆ ಪತ್ರವನ್ನು ಬರೆದು ಕಳುಹಿಸಿದರೂ ಸರಿ ಹೋಗುತ್ತದೆ. ಆನಂತರ ಬಾಪ್‌ದಾದಾ ಮೈಕ್ ಆಗಿ ತಯಾರಾದವರೆಲ್ಲರನ್ನೂ ಸೇರಿಸಿ ಸಂಘಟನೆಯಾಗಿ ಒಂದು ಕಾರ್ಯಕ್ರಮವನ್ನು ಮಾಡುತ್ತಾರೆ. ಹಾಗೆಂದು ಮಾರ್ಚ್ ಒಳಗಡೆ ಮೈಕ್ ಗಳನ್ನು ತರಬೇಕೆಂದು ಅಲ್ಲ. ಅವರನ್ನು ಅಲ್ಲಿಯೇ ಇರಲು ಬಿಡಿ, ನೀವು ಬನ್ನಿರಿ. ಮೈಕ್ ಆದವರನ್ನು ಆರ್ಭಾಟದಿಂದ ಸ್ವಾಗತಿಸಬೇಕಲ್ಲವೇ? ಆದ್ದರಿಂದ ಅವರಿಗೆ ಪ್ರತ್ಯೇಕವಾದ ಕಾರ್ಯಕ್ರಮವನ್ನು ಇಟ್ಟು ಮೊದಲ ನಂಬರ್, ಎರಡನೇ ನಂಬರ್, ಮೂರನೇ ನಂಬರ್ ಎಂದು ಉಡುಗರೆಯನ್ನು ಕೊಡುತ್ತಾರೆ. ಮಾರ್ಚಿಗೆ ಫಲಿತಾಂಶವನ್ನು ತರಬೇಕು. ಒಳ್ಳೆಯದು. ಈಗ ಏನನ್ನು ನೆನಪಿಟ್ಟುಕೊಳ್ಳುತ್ತೀರಿ? ಯಾವ ವಿಷಯದ ಮೇಲೆ ಗಮನವನ್ನು ಇಟ್ಟುಕೊಳ್ಳುತ್ತೀರಿ? ಬೇಹದ್ದಿನ ವೈರಾಗ್ಯ. ಈಗ ಆತ್ಮರನ್ನು ಇಚ್ಛೆಗಳಿಂದ ಬಚಾವ್ ಮಾಡಿ. ಪಾಪ ಬಹಳ ದುಃಖಿಯಾಗಿದ್ದಾರೆ. ಬಹಳ ತೊಂದರೆಯಲ್ಲಿದ್ದಾರೆ. ಹಾಗಾದರೆ ಈಗ ದಯಾ ಹೃದಯಗಳಾಗಿ. ದಯೆಯ ಅಲೆಯನ್ನು ಬೇಹದ್ದಿನ ವೈರಾಗ್ಯ ವೃತ್ತಿಯ ಮೂಲಕ ಹರಡಿಸಿ. ಈಗ ಶ್ರೇಷ್ಠಾತಿ ಶ್ರೇಷ್ಠ ಪರಮಧಾಮದಲ್ಲಿ ತಂದೆಯ ಜೊತೆ ಕುಳಿತು ಸರ್ವ ಆತ್ಮರಿಗೆ ದಯೆಯ ದೃಷ್ಟಿಯನ್ನು ಕೊಡಿ. ಪ್ರಕಂಪನಗಳನ್ನು ಹರಡಿಸಿ. ಹರಡಿಸಬಲ್ಲಿರಿ ಅಲ್ಲವೇ? ಹಾಗಾದರೆ ಈಗ ಪರಮಧಾಮದಲ್ಲಿ ತಂದೆಯ ಜೊತೆ ಕುಳಿತು ಬಿಡಿ. ಅಲ್ಲಿಂದ ಈ ಬೇಹದ್ದಿನ ವಾಯುಮಂಡಲವನ್ನು ಹರಡಿಸಿ. (ಬಾಪ್ದಾದಾರವರು ಡ್ರಿಲ್ ಮಾಡಿಸಿದರು) ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ಅತಿ ಸ್ನೇಹಿ ಮಕ್ಕಳಿಗೆ, ಸರ್ವ ನಾಲ್ಕಾರು ಕಡೆಯ ಸಾಧನೆ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಬಾಪ್‍ದಾದಾರವರಿಗೆ ಇಡೀ ದಿನದಲ್ಲಿ ಬಹಳ ಪ್ರೀತಿಯ, ಮಧುರ ಮಧುರ ಗೀತೆಯನ್ನು ಹೇಳುವಂತಹ, ಆತ್ಮಿಕ ವಾರ್ತಾಲಾಪ ಮಾಡುವಂತಹ ಶಕ್ತಿಯರಿಗೆ, ಗುಣಗಳ ವರದಾನದಿಂದ ಜೋಳಿಗೆಯನ್ನು ತುಂಬಿಸಿಕೊಳ್ಳುವಂತಹ, ಬಾಪ್‍ದಾದಾರವರಿಗೆ ಎಲ್ಲರ ಗೀತೆ, ಖುಷಿಯ ಗೀತೆ, ಸ್ನೇಹದ ಗೀತೆ, ಆತ್ಮೀಯ ನಶೆಯ ಗೀತೆ, ಮಧುರ ಮಧುರ ಮಾತುಗಳು ಬಹಳ ಬಹಳ ಹೃದಯವನ್ನು ಆನಂದ ಪಡಿಸುವಂತಹ ಗೀತೆಗಳು ಕೇಳಿಸುತ್ತಿದ್ದವು ಹಾಗೂ ಬಾಪ್‍ದಾದಾರವರು ಸಹ ಕೇಳಿಸಿಕೊಳ್ಳುವುದರಲ್ಲಿ ಹಾಗೂ ಮಿಲನ ಮಾಡುವುದರಲ್ಲಿ ಲವಲೀನರಾಗಿದ್ದರು. ಹಾಗಾದರೆ ಇಂತಹ ಸತ್ಯ ಹೃದಯದ ಮಾತನ್ನು ಹೇಳುವಂತಹ ಮಕ್ಕಳು ಮಹಾನ್ ಆಗಿದ್ದಾರೆ ಹಾಗೂ ಸದಾ ಮಹಾನ್ ಆಗಿ ಇರುತ್ತಾರೆ, ಇಂತಹ ಮಧುರ ಮಧುರ ಮಕ್ಕಳು ಸದಾ ಬೇಹದ್ದಿನ ವೈರಾಗ್ಯವೃತ್ತಿಯನ್ನು ತೊಡಗಿಸಿಕೊಳ್ಳುವಂತಹ, ದೃಢ ನಿಶ್ಚಯಬುದ್ಧಿ ಮಕ್ಕಳಿಗೆ ಬಾಪ್‍ದಾದಾರವರು ಒಂದರ ಬದಲಾಗಿ ಪದಮದಷ್ಟು ರಿಟರ್ನ್ ಸ್ನೇಹವನ್ನು ಕೊಡುತ್ತಿದ್ದಾರೆ. ಹೃದಯ ರಾಮನ ಹೃದಯದಲ್ಲಿ ಇರುವಂತಹ ಎಲ್ಲಾ ಮಕ್ಕಳಿಗೂ ಬಹಳ ಬಹಳ ನೆನಪು ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 18-01-1999.

***ವರ್ತಮಾನ ಸಮಯ ಪ್ರಮಾಣ ವೈರಾಗ್ಯವೃತ್ತಿಯನ್ನು ಪ್ರತ್ಯಕ್ಷ ಮಾಡಿ ಸಾಧನೆಯ ವಾಯುಮಂಡಲವನ್ನು ತಯಾರು ಮಾಡಿರಿ.***

ಯಾವ ಮಗುವಾದರೆ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಮಿಲನವನ್ನು ಆಚರಿಸಿಕೊಳ್ಳುತ್ತಾರೆಯೋ ಆ ಪ್ರತಿಯೊಂದು ಮಗುವಿಗೆ ಯಾವ ವರದಾನ ಬೇಕೆಂದರೆ ಆ ವರದಾನ ಸಹಜವಾಗಿ ಪ್ರಾಪ್ತಿಯಾಗುತ್ತದೆ. ವರದಾನಗಳ ಬಂಡಾರ ತೆರೆದೇ ಇದೆ ವರದಾನಗಳನ್ನು ಪಡೆಯಲು ಸಾಧನ ಮನಸ್ಸಿನ ಸ್ನೇಹ ಎಂದು ತಿಳಿಸುತ್ತಾ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ನೇಹ ಹಾಗೂ ಸಮರ್ಥತೆಯ ವರದಾನವನ್ನು ಪಡೆದಿರುವ ಸ್ನೇಹ ಸ್ವರೂಪ.

2. ನಾನು ಬ್ರಹ್ಮಾತಾಯಿಯ ಸಮಾನವಾಗಿ ಸಾಕಾರದಲ್ಲಿ ಪ್ರತಿಯೊಂದು ಮಗುವಿನ ಪಾಲನೆ ಮಾಡಲು ನಿಮಿತ್ತವಾಗಿದ್ದೇನೆ.

3. ನಾನು ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತವಾಗಿ ಮಿಲನ ಆಚರಿಸಿ ಸಹಜವಾಗಿ ವರದಾನಗಳನ್ನು ಪಡೆದಿದ್ದೇನೆ.

4. ನನಗೆ ಒಬ್ಬ ಶಿವ ತಂದೆಯೊಂದಿಗೆ ಸರ್ವ ಸಂಬಂಧಗಳಿವೆ.

5. ನನ್ನ ಸಂಬಂಧ ಸಂಪರ್ಕದಲ್ಲಿ ಬಂದಿರುವ ಎಲ್ಲಾ ಆತ್ಮಿಕ ಸಹೋದರರಿಗೆ ನನ್ನ ಮುಖ ಮತ್ತು ಮೂರ್ತಿಯಿಂದ ಶಿವ ತಂದೆ ಮತ್ತು ಬ್ರಹ್ಮಾ ತಂದೆಯ ಗುಣಗಳು ಕಾಣಿಸುತ್ತಿವೆ & ನನ್ನ ನಯನಗಳು, ನನ್ನ ಮಾತು, ನನ್ನ ವೃತ್ತಿ ಹಾಗೂ ತರಂಗಗಳು ಅತೀತವಾಗಿವೆ ಎಂದು ಅನುಭವ ಮಾಡಿಕೊಳ್ಳುತ್ತಿದ್ದಾರೆ.

6. ನಾನು ಎಲ್ಲಿದ್ದರೂ, ಯಾವುದೇ ಕರ್ಮ ಕ್ಷೇತ್ರದಲ್ಲಿದ್ದರೂ, ತಂದೆಯ ಸಮಾನ ಗುಣ, ಕರ್ಮ ಹಾಗೂ ಶ್ರೇಷ್ಠ ವೃತ್ತಿಯ ವಾಯುಮಂಡಲವನ್ನು ಎಲ್ಲರಿಗೂ ಅನುಭವ ಮಾಡಿಸಿದ್ದೇನೆ.

7. ಯಾರೇ ನನ್ನ ಸಂಬಂಧ ಸಂಪರ್ಕದಲ್ಲಿ ಬಂದರೂ ಅವರ ಹೃದಯದಿಂದ "ಈ ಆತ್ಮ ತಂದೆಯ ಸಮಾನವಾಗಿದೆ" ಎಂಬ ಶಬ್ದ ಹೊರ ಬಂದಿತು.

8. ನಾನು ತಂದೆಯ ಸಮಾನವಾದ ನನ್ನ ಸ್ಥಿತಿಯಿಂದ ತಂದೆಯನ್ನು ಪ್ರತ್ಯಕ್ಷ ಮಾಡುತ್ತಿದ್ದೇನೆ.

9. ನಾನು ಸಾಧನಗಳಿಗೆ ದೂರವಿದ್ದು ಸಾಧನೆಯನ್ನು ಹೆಚ್ಚಿಸುವ ಬೇಹದ್ ವೈರಾಗ್ಯ ವೃತ್ತಿಯಲ್ಲಿ ಇದ್ದೇನೆ.

10. ನನ್ನ ಬೇಹದ್ ವೈರಾಗ್ಯವೃತ್ತಿಯಿಂದ ವಾಯುಮಂಡಲದಲ್ಲಿರುವ ಆತ್ಮಿಕ ಸಹೋದರರು ಸುಖ ಮತ್ತು ಶಾಂತಿಯನ್ನು ಅನುಭವ ಮಾಡುತ್ತಿದ್ದಾರೆ. ತೊಂದರೆಗಳಿಂದ ಮುಕ್ತಿಯನ್ನು ಪಡೆಯುತ್ತಿದ್ದಾರೆ.

11. ನಾನು ವೃಕ್ಷದಲ್ಲಿರುವ ಬೇರಾಗಿದ್ದೇನೆ, ನಾನು ಬುನಾದಿಯಾದ ಕಾರಣ ನನ್ನ ಆಲೋಚನೆಯ ತರಂಗಗಳು ಇಡೀ ವಿಶ್ವದಲ್ಲಿ ವ್ಯಾಪಿಸುತ್ತಿವೆ.

12. ನನ್ನ ಸಾಧನೆಯ ಮತ್ತು ಬೇಹದ್ ವೈರಾಗ್ಯವೃತ್ತಿಯ ವಾಯುಮಂಡಲದಿಂದ ನನ್ನ ಸಹಯೋಗಿಗಳನ್ನು ಸಹಜ ಯೋಗಿಗಳನ್ನಾಗಿ ತಯಾರು ಮಾಡುತ್ತಿದ್ದೇನೆ.

13. ನನಗೆ ವೈಭವಗಳ ಮೇಲೆ, ಮಕ್ಕಳ ಮೇಲೆ ಮೋಹವಿಲ್ಲದ ಎಲ್ಲವುಗಳೊಂದಿಗೆ ವೈರಾಗ್ಯವೃತ್ತಿ ಇರುವ ಬಾಪ್ ಸಮಾನ ಸ್ವರೂಪ.

14. ನಾನು ಸರ್ವ ಬಂಧನಗಳಿಂದ ಮುಕ್ತಿಯಾಗಿದ್ದೇನೆ.

15. ನಾನು ಬೇಹದ್ ವೈರಾಗ್ಯ ವೃತ್ತಿಯಿಂದ ಬೇಹದ್ ದಯೆಯ ವಾಯುಮಂಡಲವನ್ನು ವ್ಯಾಪಿಸುತ್ತಿದ್ದೇನೆ.